ಸೂರ್ಯೋದಯ: 6: 20 ಸೂರ್ಯಾಸ್ತ : 6:21 | ಚಂದ್ರೋದಯ: ರಾ. 10:09 ಚಂದ್ರಾಸ್ತ: ಬೆ. 10:32 | ಗುರುವಾರದ ಉಷ್ಣಾಂಶ : ಗರಿಷ್ಠ 33° ಕನಿಷ್ಠ 25°

ಶುಕ್ರವಾರದ ಉಷ್ಣಾಂಶ 32° ಗರಿಷ್ಠ | 25° ಕನಿಷ್ಠ | ಶನಿವಾರ 32° : 24° | ಭಾನುವಾರ 32° : 24° | ಸೋಮವಾರ 32° : 24°

ಹವಾಮಾನ ಮುನ್ಸೂಚನೆ: ಜಿಲ್ಲೆಯಾದ್ಯಂತ ಮೋಡ ಕವಿದ ವಾತಾವರಣ. ಸಾಧಾರಣ ಮಳೆ ಸಾಧ್ಯತೆ

ದಕ್ಷಿಣ ಕನ್ನಡ ಜಿಲ್ಲೆ ಅಥವಾ ಮಂಗಳೂರು ಜಿಲ್ಲೆ

ಯಾವುದು ಸೂಕ್ತ? ಪ್ರತಿಕ್ರಿಯಿಸಿ 96069 12235

'ದಕ್ಷಿಣ ಕನ್ನಡ'ವೇ ಉಳಿಯಲಿ

ಬೆನೆಟ್ ಅಮ್ಮನ್ನ

ಜಿಲ್ಲೆಗೆ ಸಂಬಂಧಿಸಿದ ಎಲ್ಲ ದಾಖಲೆಗಳಲ್ಲೂ ದಕ್ಷಿಣ ಕನ್ನಡ ಎಂದೇ ಉಲ್ಲೇಖವಾಗಿದೆ. ಸರ್ಕಾರದ್ದೂ ಸೇರಿದಂತೆ ಯಾವುದೇ ಬರವಣಿಗೆ ಆರಂಭವಾಗುವುದು ದಕ್ಷಿಣ ಕನ್ನಡ ಜಿಲ್ಲೆಯ ..ತಾಲ್ಲೂಕಿನ...ಗ್ರಾಮ ಎಂದು. ಹೀಗಿರುವಾಗ ಜಿಲ್ಲೆಯ ಹೆಸರು ಬದಲಿಸಿದರೆ ಎಲ್ಲವನ್ನೂ ಬದಲಿಸಬೇಕಾದೀತು.

ಪೋರ್ಚುಗೀಸರ ದಾಖಲೆಗಳಲ್ಲಿ ಜಿಲ್ಲೆಯ ಹೆಸರಿನ ಜೊತೆ ಕೆನರಾ ಎಂದು ಇತ್ತು. ಅದು ಬದಲಾಗಿ ದಕ್ಷಿಣ ಕನ್ನಡ ಎಂದು ಮಾಡಿ ಅನೇಕ ಕಾಲ ಕಳೆದಿದೆ. ಹೆಸರನ್ನು ಬದಲಿಸುತ್ತ ಹೋದರೆ ಮುಂದೆ ಸ್ಥಳನಾಮಗಳ ಅಧ್ಯಯನವನ್ನೇ ಮಾಡಬೇಕಾದೀತು. ಜಿಲ್ಲೆಯ ತಾಲ್ಲೂಕಿನವರು ದಕ್ಷಿಣ ಕನ್ನಡ ಜಿಲ್ಲೆಯವರು ಎಂದು ಹೇಳುವುದಲ್ಲದೆ ಮಂಗಳೂರಿನವರು ಎನ್ನುವುದಿಲ್ಲ. ಹೆಸರು ಬದಲಿಸಿದರೆ ಅವರೆಲ್ಲ ಪ್ರತ್ಯೇಕ ಜಿಲ್ಲೆಯ ಬೇಡಿಕೆ ಇಟ್ಟರೂ ಅಚ್ಚರಿಪಡಬೇಕಾಗಿರುವುದಿಲ್ಲ.

ಬೆನೆಟ್ ಅಮ್ಮನ್ನ, ದಕ್ಷಿಣ ಕನ್ನಡ ಉಳಿಸಿ ವೇದಿಕೆ

ಸಂಬಂಧವೇ ಇಲ್ಲದ ಹೆಸರು

ರಾಜೇಶ್ ಆಳ್ವ

ಸೌತ್ ಕೆನರಾ, ಸೌತ್ ಕೆನರಾ ಡಿಸ್ಟ್ರಿಕ್ಟ್ ಬೋರ್ಡ್‌ ಮುಂತಾದ ಹೆಸರುಗಳಿದ್ದ ಜಿಲ್ಲೆಗೆ ಕನ್ನಡದ್ದೇ ಹೆಸರು ಬರುವಾಗ ದಕ್ಷಿಣ ಕನ್ನಡ ಎಂದಾಗಿದೆ. ಇದು ಇಂಗ್ಲಿಷ್‌ನಲ್ಲಿದ್ದ ಹೆಸರಿನ ನೇರ ಅನುವಾದ. ಆದರೆ ಜಿಲ್ಲೆಗೂ ಈ ಹೆಸರಿಗೂ ಸಂಬಂಧ ಇಲ್ಲ. ದಕ್ಷಿಣ ಕನ್ನಡ ಎಂದರೆ ಯಾವುದರ ದಕ್ಷಿಣ ಎಂದು ಸ್ಪಷ್ಟವಿಲ್ಲ.

ಜಿಲ್ಲೆಯ ಹೆಸರು ತುಳುನಾಡು ಎಂದು ಆಗಬೇಕೆಂಬ ಬೇಡಿಕೆಯನ್ನು ಪಣಿಯಾಡಿಯವರು ಇರಿಸಿದ್ದರು. ಆದರೆ ತುಳು ಅಸ್ಮಿತೆಯನ್ನು ತೆಗೆದುಹಾಕಲು ಮತ್ತು ಕನ್ನಡ ಮೇಲುಗೈ ಸಾಧಿಸಬೇಕು ಎಂದು ಜಿಲ್ಲೆಗೆ ದಕ್ಷಿಣ ಕನ್ನಡ ಎಂದು ಹೆಸರಿಟ್ಟರು. ಇದನ್ನು ಮಂಗಳೂರು ಎಂದು ಮಾಡಬೇಕೆಂಬ ಬೇಡಿಕೆ ಹಿಂದಿನಿಂದಲೇ ಇದೆ. ಮಂಗಳೂರು ಎಂಬುದು ಬ್ರ್ಯಾಂಡ್ ಹೆಸರಾಗಿದ್ದು ವ್ಯಾಪಾರ ಸಂಬಂಧಿ ಮತ್ತು ಗುರುತು ಹೇಳುವ ವಿಷಯ ಬಂದಾಗ ಈ ಹೆಸರು ಬೇಕಾಗುತ್ತದೆ. ಆದ್ದರಿಂದ ಮಂಗಳೂರು ಎಂದು ಮಾಡಿದರೆ ಉತ್ತಮ.

ರಾಜೇಶ್ ಕೃಷ್ಣ ಆಳ್ವ, ನಿರ್ದೇಶಕರು ತುಳು ವರ್ಲ್ಡ್ ಫೌಂಡೇಷನ್

ಮಂಗಳೂರು ರೈಲು ಜಾಲ ಅಧಿಕೃತ ಸೇರ್ಪಡೆ

ಬುಧವಾರ ಮಧ್ಯರಾತ್ರಿಯಿಂದಲೇ ಜಾರಿಗೆ, ಪ್ರಮುಖ ಕೇಂದ್ರಗಳಿಗೆ ಮೈಸೂರು ವಿಭಾಗದ ಅಧಿಕಾರಿಗಳ ಭೇಟಿ

ಪ್ರಜಾವಾಣಿ ವಾರ್ತೆ

ನೈಋತ್ಯ ರೈಲ್ವೆ
दक्षिण पश्चिम रेलवे
SOUTH WESTERN RAILWAY
ಕಾಯ್ದಿರಿಸದ ಟಿಕೆಟ್ ಕೌಂಟರ್
अनारक्षित टिकट काउंटर
UNRESERVED TICKET COUNTER
ಪ್ರಯಾಣಿಕರ ಕಾಯ್ದಿರಿಸಿದ ಟಿಕೆಟ್ ಕೇಂದ್ರ
यात्री आरक्षण टकिट केंद्र
PASSENGER RESERVATION TICKET CENTRE
ನೈರುತ್ಯ ರೈಲ್ವೆ ವಿಭಾಗದ ನಾಮಫಲಕ ಅಳವಡಿಸಲಾಗಿದೆ

ಮಂಗಳೂರು: ದಕ್ಷಿಣ ರೈಲ್ವೆ ಪಾಲಕ್ಕಾಡ್ ವಿಭಾಗದ ವ್ಯಾಪ್ತಿಯಲ್ಲಿದ್ದ ಮಂಗಳೂರು ರೈಲ್ವೆ ಜಾಲವು ಬುಧವಾರ ಮಧ್ಯರಾತ್ರಿಯಿಂದ ಅಧಿಕೃತವಾಗಿ ನೈಋತ್ಯ ರೈಲ್ವೆ ಮೈಸೂರು ವಿಭಾಗಕ್ಕೆ ಸೇರ್ಪಡೆಗೊಂಡಿದೆ.

ರೈಲ್ವೆ ವೇಳಾಪಟ್ಟಿ ಅಥವಾ ಇನ್ನಿತರ ಯಾವುದೇ ದೈನಂದಿನ ಕಾರ್ಯಾಚರಣೆಯಲ್ಲಿ ಬದಲಾವಣೆ ಇಲ್ಲದ ಕಾರಣ, ಪ್ರಯಾಣಿಕರು ಎಂದಿನಂತೆ ರೈಲ್ವೆ ನಿಲ್ದಾಣಕ್ಕೆ ತೆರಳಿ, ನಿಗದಿತ ಸಮಯಕ್ಕೆ ಪ್ರಯಾಣ ಬೆಳೆಸಿದರು. ಕಳೆದ ಎರಡು ದಿನಗಳಿಂದ ಮೈಸೂರು ವಿಭಾಗದ ಅಧಿಕಾರಿಗಳು ನಗರದಲ್ಲಿ ಬೀಡುಬಿಟ್ಟಿದ್ದು, ಸ್ಥಳೀಯ ವ್ಯವಸ್ಥೆ ಪರಿಶೀಲಿಸಿದರು.

ಪಾಲಕ್ಕಾಡ್ ವಿಭಾಗದಿಂದ ಮೈಸೂರು ವಿಭಾಗಕ್ಕೆ ವರ್ಗಾವಣೆಯಾಗುವ ಪ್ರಕ್ರಿಯೆಯ ಅಂಗವಾಗಿ, ಕಾರ್ಯಾಚರಣೆಯ ನಿಯಂತ್ರಣ ವ್ಯವಸ್ಥೆಯಲ್ಲಿ ಅಗತ್ಯ ಬದಲಾವಣೆಗಳನ್ನು ಸೆಂಟರ್ ಫಾರ್ ರೈಲ್ವೆ ಇನ್ಫಾರ್ಮೇಷನ್ ಸಿಸ್ಟಮ್ಸ್ (ಸಿಆರ್‌ಐಎಸ್) ಜಾರಿಗೊಳಿಸುತ್ತಿದೆ. ಹೊಸದಾಗಿ ಸೇರ್ಪಡೆಗೊಂಡಿರುವ ಮಂಗಳೂರು ರೈಲ್ವೆ ಪ್ರದೇಶದ ರೈಲುಗಳ ಕಾರ್ಯಾಚರಣೆಯನ್ನು ನಿಯಂತ್ರಿಸಲು ಮೈಸೂರು ವಿಭಾಗವು ಪ್ರಧಾನ ಕಚೇರಿಯಲ್ಲಿ ಹೆಚ್ಚುವರಿ ಕಂಟ್ರೋಲ್ ಬೋರ್ಡ್ ಅಳವಡಿಸಿದೆ ಎಂದು ಮೈಸೂರು ವಿಭಾಗದ ಪಿಆರ್‌ಒ ತಿಳಿಸಿದ್ದಾರೆ.

ಆರಂಭಿಕ ಮೂರು ತಿಂಗಳು ಮಂಗಳೂರು ಕೋಚಿಂಗ್ ಡಿಪೋದಲ್ಲಿ ನಡೆಯುತ್ತಿರುವ ರೈಲುಗಳ ಕಾರ್ಯಾಚರಣೆ ಅಥವಾ ಪ್ರಾಥಮಿಕ ನಿರ್ವಹಣಾ ಕಾರ್ಯಗಳಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ. ಪ್ರಸ್ತುತ ಇರುವ ವ್ಯವಸ್ಥೆಯೇ ಮುಂದುವರಿಯಲಿದೆ. ದಕ್ಷಿಣ ರೈಲ್ವೆ ಮತ್ತು ನೈಋತ್ಯ ರೈಲ್ವೆ ನಡುವಿನ ಇಂಟರ್‌ಚೇಂಜ್ ಪಾಯಿಂಟ್ ಈವರೆಗೆ ಇದ್ದ ಪಡೀಲ್‌ನಿಂದ ಉಳ್ಳಾಲಕ್ಕೆ ಸ್ಥಳಾಂತರಗೊಂಡಿದೆ ಎಂದು ಅವರು ಮಾಹಿತಿ ನೀಡಿದರು.

ಮೈಸೂರು ವಿಭಾಗದ ಎಡಿಆರ್‌ಎಂ ಶಮ್ಮಾಸ್ ಹಮೀದ್ ಅವರು ವ್ಯವಸ್ಥೆಗಳನ್ನು ಪರಿಶೀಲಿಸಿ, ಸುಗಮ ವರ್ಗಾವಣೆ ಹಾಗೂ ರೈಲು ಕಾರ್ಯಾಚರಣೆಗಳು ಯಾವುದೇ ಅಡಚಣೆಯಿಲ್ಲದೆ ಮುಂದುವರಿಯಲು ಅಗತ್ಯ ಕ್ರಮ ಕೈಗೊಂಡರು. ಮಂಗಳೂರು ಸೆಂಟ್ರಲ್, ಮಂಗಳೂರು ಜಂಕ್ಷನ್, ಪಣಂಬೂರು, ಜೋಕಟ್ಟೆ, ಉಳ್ಳಾಲ ಸೇರಿ ಮಂಗಳೂರು ಪ್ರದೇಶದ ಪ್ರಮುಖ ರೈಲು ಕೇಂದ್ರಗಳಿಗೆ ಭೇಟಿ ನೀಡಿ, ಅಲ್ಲಿನ ಕಾರ್ಯಾಚರಣೆ ವ್ಯವಸ್ಥೆ ಹಾಗೂ ಸೌಲಭ್ಯಗಳನ್ನು ಪರಿಶೀಲಿಸಿದರು.

ಕಾರ್ಯಾಚರಣೆಗೆ ಸಂಬಂಧಿಸಿದ ಅಗತ್ಯಗಳನ್ನು ತ್ವರಿತವಾಗಿ ಪರಿಹರಿಸುವಂತೆ ಹಾಗೂ ಕ್ಷೇತ್ರ ಮಟ್ಟದ ಘಟಕಗಳು ಮತ್ತು ವಿಭಾಗೀಯ ಕಚೇರಿಯ ನಡುವೆ ನಿರಂತರ ಸಮನ್ವಯ ಕಾಯ್ದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಯಿತು.

ಸಿಬ್ಬಂದಿ ಮುಂದುವರಿಕೆ

ಪ್ರಸ್ತುತ ಆಡಳಿತಾತ್ಮಕ ವರ್ಗಾವಣೆ ಪ್ರಕ್ರಿಯೆ ಮಾತ್ರ ಪೂರ್ಣಗೊಂಡಿದೆ. ಹಾಲಿ ಸಿಬ್ಬಂದಿ ಮುಂದುವರಿದಿದ್ದು, ಅಗತ್ಯ ದಾಖಲೆಗಳ ಪರಿಶೀಲನೆಯ ನಂತರ ಒಂದೆರಡು ತಿಂಗಳಲ್ಲಿ, ಸಿಬ್ಬಂದಿ ವರ್ಗಾವಣೆ ಪ್ರಕ್ರಿಯೆ ನಡೆಯಬಹುದು. ಪಾಲಕ್ಕಾಡ್ ವಿಭಾಗಕ್ಕೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವವರಿಗೆ ಅಲ್ಲಿನ ಹುದ್ದೆ ಲಭ್ಯತೆ ಆಧರಿಸಿ, ಆದ್ಯತೆ ಮೇರೆಗೆ ವರ್ಗಾವಣೆ ಸಿಗಬಹುದು. ಎಲ್ಲ ಪ್ರಕ್ರಿಯೆಗಳು ಪೂರ್ಣಗೊಳ್ಳುವ ತನಕ ಪಾಲಕ್ಕಾಡ್ ವಿಭಾಗದ ಮೂಲಕವೇ ಸಿಬ್ಬಂದಿ ವೇತನ ಪಾವತಿಯಾಗುತ್ತದೆ. ಮೈಸೂರು ವಿಭಾಗವು ಪಾಲಕ್ಕಾಡ್ ವಿಭಾಗಕ್ಕೆ ಆ ಮೊತ್ತವನ್ನು ಪಾವತಿಸುತ್ತದೆ ಎಂದು ಮೂಲಗಳು ತಿಳಿಸಿವೆ.

ಕೆರೆಗೆ ಬಿದ್ದು ಯೋಗ ಶಿಕ್ಷಕ ಪ್ರಸಾದ್ ಪಾಣಾಜೆ ಸಾವು

ಪ್ರಸಾದ್ ಪಾಣಾಜೆ

ಪುತ್ತೂರು: ಹಿರಿಯ ಯೋಗಶಿಕ್ಷಕ, ಬನ್ನೂರು ಗ್ರಾಮದ ನೆಕ್ಕಿಲ ನಿವಾಸಿ ಪ್ರಸಾದ್ ಪಾಣಾಜೆ (70) ಅವರು ಗುರುವಾರ ಆಕಸ್ಮಿಕವಾಗಿ ಕೆರೆಗೆ ಬಿದ್ದು ಮೃತಪಟ್ಟಿದ್ದಾರೆ.

ಗುರುವಾರ ಬೆಳಿಗ್ಗೆ ಅಡಿಕೆ ತೋಟಕ್ಕೆ ತೆರಳಿದ್ದ ಅವರು ಬಹಳ ಸಮಯವಾದರೂ ಹಿಂತಿರುಗಿ ಮನೆಗೆ ಬಾರದಿದ್ದ ಹಿನ್ನಲೆಯಲ್ಲಿ ಅವರ ಪತ್ನಿ ಹುಡುಕಿಕೊಂಡು ತೋಟಕ್ಕೆ ಹೋದಾಗ ತೋಟದ ಕೆರೆಯ ನೀರಿನಲ್ಲಿ ಅವರ ಮೃತದೇಹ ತೇಲುತ್ತಿರುವುದು ಕಂಡುಬಂದಿದೆ. ತೋಟಕ್ಕೆ ಅಡಿಕೆ ಹೆಕ್ಕಲು ಹೋಗಿದ್ದ ಅವರು ಆಕಸ್ಮಿಕವಾಗಿ ಕಾಲು ಜಾರಿ ಕೆರೆಗೆ ಬಿದ್ದು ಮೃತಪಟ್ಟಿರುವುದಾಗಿ ಮೃತರ ಪತ್ನಿ ನೀಡಿದ ದೂರಿನಂತೆ ಪುತ್ತೂರು ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತರು ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಮಂಗಳೂರು ವಿವಿ ಅಂತರ ಕಾಲೇಜು ಮಹಿಳಾ ಕಬಡ್ಡಿ ಟೂರ್ನಿ

ಆಳ್ವಾಸ್ ತಂಡಕ್ಕೆ ಚಾಂಪಿಯನ್‌ಶಿಪ್

ಪ್ರಜಾವಾಣಿ ವಾರ್ತೆ

ಮೂಡುಬಿದಿರೆಯ ಆಳ್ವಾಸ್ ಕಾಲೇಜಿನ ಮಹಿಳಾ ತಂಡ

ಉಜಿರೆ: ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ ಮತ್ತು ಉಜಿರೆಯ ಎಸ್‌ಡಿಎಂ ಕಾಲೇಜಿನ ಜಂಟಿ ಆಶ್ರಯದಲ್ಲಿ ಸೆ. 29 ಮತ್ತು 30ರಂದು ಉಜಿರೆಯ ಎಸ್‌ಡಿಎಂ ಕಾಲೇಜಿನಲ್ಲಿ ನಡೆದ ಅಂತರ ಕಾಲೇಜು ಮಹಿಳಾ ಕಬಡ್ಡಿ ಟೂರ್ನಿಯಲ್ಲಿ ಮೂಡುಬಿದಿರೆಯ ಆಳ್ವಾಸ್ ಕಾಲೇಜು ಚಾಂಪಿಯನ್ ಆಯಿತು. ಅತಿಥೇಯ ಎಸ್‌ಡಿಎಂ ಕಾಲೇಜು ತಂಡ ರನ್ನರ್ ಅಪ್ ಪಡೆಯಿತು.

ಬೆಸ್ಟ್ ಆಲ್ ರೌಂಡರ್: ಅನನ್ಯಾ ಎಂ., ಉಜಿರೆ ಎಸ್‌ಡಿಎಂ ಕಾಲೇಜು, ಬೆಸ್ಟ್ ಕ್ಯಾಚರ್: ಮೂಡುಬಿದಿರೆ ಆಳ್ವಾಸ್ ಕಾಲೇಜಿನ ಅನ್ನಪೂರ್ಣ, ಬೆಸ್ಟ್ ರೈಡರ್: ಭಾರತಿ, ಆಳ್ವಾಸ್ ಕಾಲೇಜು, ಮೂಡಬಿದಿರೆ. ಒಟ್ಟು 30 ತಂಡಗಳು ಟೂರ್ನಿಯಲ್ಲಿ ಭಾಗವಹಿಸಿದ್ದವು.

ಬುಧವಾರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಎಸ್‌ಡಿಎಂ ಕಾಲೇಜಿನ ಪ್ರಾಂಶುಪಾಲ ಪ್ರೊ.ಪಿ. ವಿಶ್ವನಾಥ, ಉಪ ಪ್ರಾಂಶುಪಾಲ ಪ್ರೊ.ನಂದಕುಮಾರಿ ಕೆ.ಪಿ., ಕಾಲೇಜಿನ ಶೈಕ್ಷಣಿಕ ಚಟುವಟಿಕೆಗಳ ಸಂಯೋಜಕ ಎಸ್.ಎನ್. ಕಾಕತ್ಕರ್, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ರಮೇಶ್ ಎಚ್., ಸುದೀನ, ಕೃಷ್ಣಾನಂದ, ಶಾರದಾ ಮೊದಲಾದವರು ಉಪಸ್ಥಿತರಿದ್ದು ವಿಜೇತರನ್ನು ಅಭಿನಂದಿಸಿದರು.

ಶಂಸುಲ್ ಉಲಮಾ ನೇರ್ಚೆ ನಾಳೆ

ಬಂಟ್ವಾಳ: ಇಲ್ಲಿನ ದಾರಿಮೀಸ್ ಅಸೋಸಿಯೇಶನ್ ಜಿಲ್ಲಾ ಸಮಿತಿ ವತಿಯಿಂದ 25ನೇ ವಾರ್ಷಿಕ ಶಂಸುಲ್ ಉಲಮಾ ನೇರ್ಚೆ ಕಾರ್ಯಕ್ರಮ ಅ.3 ರಂದು ಮಧ್ಯಾಹ್ನ 2 ಗಂಟೆಗೆ ಅಕ್ಕರಂಗಡಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಕೆ.ಎಂ.ಖಾಸಿಂ ದಾರಿಮಿ ಹೇಳಿದರು.

ಸಮಸ್ತ ಕೇರಳ ಜಮೀಯತ್ತುಲ ಉಲಮಾ ಕೇಂದ್ರದ ಅಧ್ಯಕ್ಷ ಮುಹಮ್ಮದ್ ಜಿಫ್ರಿ ಮುತ್ತುಕೋಯ ತಂಙಳ್ ಕಾರ್ಯಕ್ರಮ ಉದ್ಘಾಟಿಸುವರು. ಪ್ರಮುಖರಾದ ಎ.ವಿ.ಅಬ್ದುಲ್ ರಹಿಮಾನ್, ಅಬ್ದುಲ್ ಸಲಾಂ ಬಾಖವಿ ವಡಕ್ಕೇಕಾಡ್, ಅಬ್ದುಲ್ ಖಾದರ್ ಅಲ್ ಖಾಸಿಮಿ ಬಂದ್ರಾಣ ಉಸ್ತಾದ್ ಮತ್ತಿತರರು ಭಾಗವಹಿಸುವರು ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು

ಕೆ.ಬಿ.ಅಬ್ದುಲ್ ಖಾದಿರ್ ದಾರಿಮಿ ಕೊಡಂಗಾಯಿ, ಝುಬೈರ್ ದಾರಿಮಿ ಅಕ್ಕರಂಗಡಿ, ಹನೀಫ್ ದಾರಿಮಿ ಸವಣೂರು ಇದ್ದರು.

'ಉತ್ತಮ ಜೀವನ ಶೈಲಿ ರೂಢಿಸಿಕೊಳ್ಳಿ'

ಸುಳ್ಯ ತಾಲ್ಲೂಕು ಪ್ರಾಥಮಿಕ, ಪ್ರೌಢಶಾಲಾ ಕ್ರೀಡಾಕೂಟ

ಪ್ರಜಾವಾಣಿ ವಾರ್ತೆ

ದುಗ್ಗಲಡ್ಕದಲ್ಲಿ ನಡೆದ ಸುಳ್ಯ ತಾಲ್ಲೂಕು ಮಟ್ಟದ ಪ್ರಾಥಮಿಕ, ಪ್ರೌಢ ಶಾಲಾ ಕ್ರೀಡಾಕೂಟದಲ್ಲಿ ಟಿ.ಎಂ.ಶಹೀದ್ ಮಾತನಾಡಿದರು

ಸುಳ್ಯ: ಕ್ರೀಡೆ ಶಿಕ್ಷಣದ ಅವಿಭಾಜ್ಯ ಅಂಗ. ಕ್ರೀಡೆಯಲ್ಲಿ ಕಾರ್ಯಕ್ಷಮತೆ ಕಾಪಾಡಲು ಉತ್ತಮ ಆಹಾರ ಪದ್ಧತಿ, ಜೀವನ ಶೈಲಿ ರೂಢಿಸಿಕೊಳ್ಳಿ ಎಂದು ಕರ್ನಾಟಕ ಕಾರ್ಮಿಕರ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ.ಶಹೀದ್ ಹೇಳಿದರು.

ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಸುಳ್ಯದ ದುಗ್ಗಲಡ್ಕ ಪ್ರೌಢ ಶಾಲಾ ಮೈದಾನದಲ್ಲಿ ನಡೆದ ಸುಳ್ಯ ತಾಲ್ಲೂಕು ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ಸಂಘಟನಾ ಸಮಿತಿ ಅಧ್ಯಕ್ಷೆ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷೆ ಶೀಲಾವತಿ ಮಾಧವ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಅರೆ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಕ್ರೀಡಾ ಧ್ವಜಾರೋಹಣ ಮಾಡಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಭರತ್ ಮುಂಡೋಡಿ, ಸುಳ್ಯ ಪಟ್ಟಣ ಅಭಿವೃದ್ಧಿ ಯೋಜನಾ ಪ್ರಾಧಿಕಾರ ಅಧ್ಯಕ್ಷ ಕೆ.ಎಂ.ಮುಸ್ತಫ, ತಾಲ್ಲೂಕು ಗ್ಯಾರಂಟಿ ಸಮಿತಿ ಶಾಹುಲ್ ಹಮೀದ್ ಕುತ್ತಾಮೊಟ್ಟೆ, ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಎಸ್.ಹರಗಿ, ಅಕ್ಷರ ದಾಸೋಹ ಉಸ್ತುವಾರಿ ಅಧಿಕಾರಿ ವೀಣಾ ಎಂ.ಟಿ., ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷೆ ಶಶಿಕಲ ನೀರಾಬಿದಿರೆ, ತುಳು ಕುರಲ್ ಅಧ್ಯಕ್ಷ ಕೆ.ಟಿ. ವಿಶ್ವನಾಥ್, ತಾಲ್ಲೂಕು ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ದೇವರಾಜ್, ತಾಲ್ಲೂಕು ಪ್ರೌಢಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಗೋಪಿನಾಥ್ ಮೆತ್ತಡ್ಕ ಭಾಗವಹಿಸಿದ್ದರು.

ಮುಖ್ಯಶಿಕ್ಷಕ ಸುರೇಶ್ ಸ್ವಾಗತಿಸಿದರು. ತಾಲ್ಲೂಕು ಕ್ರೀಡಾ ಪರಿವೀಕ್ಷಣಾ ಅಧಿಕಾರಿ ಸುಜಯಕುಮಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಧನಂಜಯ ಮರ್ಕಜೆ, ಹರಿಪ್ರಸಾದ ಕೊಯಿಂಗಾಜೆ ನಿರೂಪಿಸಿದರು.

ನಿಧನ ವಾರ್ತೆ

ಕೊಂಕಣಿ ಲೇಖಕ ಜೊನೆಲ್ ಕಾಸ್ಸಿಯಾ



ಮಂಗಳೂರು: 'ಜೊನೆಲ್ ಕಾಸ್ಸಿಯಾ' ನಾಮಾಂಕಿತ ಕೊಂಕಣಿ ಲೇಖಕ ಜೋನ್ ಲುವಿಸ್ ಡಿಸೋಜ (85) ಅಲ್ಪಕಾಲದ ಅಸೌಖ್ಯದಿಂದ ಸೆ. 30ರಂದು ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಜೋನ್ ಲುವಿಸ್ ಅವರು ಮೂರು ಅವಧಿಗೆ ಚರ್ಚ್‌ನ ಉಪಾಧ್ಯಕ್ಷರಾಗಿ, ಚರ್ಚ್ ಮ್ಯಾಗಝಿನ್ ಸಂಪಾದಕರಾಗಿ, ಕಾಸ್ಸಿಯಾ ಕಥೊಲಿಕ್ ಸಭೆಯ ಸ್ಥಾಪಕಾಧ್ಯಕ್ಷರಾಗಿ, ಫಾದರ್ ಮುಲ್ಲರ್ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ, ಕೊಂಕಣಿ ಭಾಷಾ ಮಂಡಳ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಇವರ 'ಲೊಟ್ರೆಚೊ ದುಡು', 'ಹಂಕಾರಾಚೊ ಪ್ರತಿಫಳ್', ಕೊಂಕಣಿ ಕಾದಂಬರಿಗಳು ಪ್ರಕಟಗೊಂಡಿವೆ. ಅನೇಕ ಸಣ್ಣ ಕಥೆಗಳು ಹಾಗೂ ಲೇಖನಗಳು ಕೊಂಕಣಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದವು.

ಮೃತರ ಅಂತ್ಯಕ್ರಿಯೆ ಶುಕ್ರವಾರ (ಅ. 2) ಸಂಜೆ 4 ಗಂಟೆಗೆ ಇಲ್ಲಿಯ ಕಾಸ್ಸಿಯಾ ಸಂತ ರೀಟಾ ಚರ್ಚ್‌ನಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಫಾದರ್ ಜಾನ್ ನೊರೋನ್ಹಾ

ಫಾ. ಜಾನ್ ನೊರೋನ್ಹಾ

ಮಂಗಳೂರು: ಮಂಗಳೂರು ಧರ್ಮಪ್ರಾಂತ್ಯದ ಹಿರಿಯ ಧರ್ಮಗುರು ಫಾ. ಜಾನ್ ನೊರೋನ್ಹಾ (82) ಜೆಪ್ಪುವಿನ 'ಸೇಂಟ್ ಜೂಜೆವಾಝ್ ಹೋಮ್‌'ನಲ್ಲಿ ಗುರುವಾರ ನಿಧನರಾದರು.

1944ರ ಏಪ್ರಿಲ್ 2ರಂದು ಪಂಬೂರಿನಲ್ಲಿ ಜನಿಸಿದ ನೊರೋನ್ಹಾ ಅವರು, 1969ರ ಡಿಸೆಂಬರ್ 3ರಂದು ಮಂಗಳೂರು ಧರ್ಮಪ್ರಾಂತ್ಯದ ಧರ್ಮಗುರು ಆಗಿ ದೀಕ್ಷೆ ಪಡೆದಿದ್ದರು. ನಾಲ್ಕು ದಶಕಗಳಿಗೂ ಹೆಚ್ಚು ಕಾಲದ ಧರ್ಮಗುರು ಸೇವೆಯ ಅವಧಿಯಲ್ಲಿ, ಅವರು ಅಗ್ರಾರ್, ಮಡಂತ್ಯಾರು, ಕುಪ್ಪೆಪದವು, ಉಪ್ಪಿನಂಗಡಿ, ರಾಣಿಪುರ ಸೇರಿದಂತೆ ವಿವಿಧ ಧರ್ಮಕೇಂದ್ರಗಳು ಮತ್ತು ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು. ದೀರ್ಘಕಾಲದ ಸಕ್ರಿಯ ಧರ್ಮಗುರು ಸೇವೆಯ ನಂತರ, ಫಾ. ನೊರೋನ್ಹಾ ಅವರು 2010ರಲ್ಲಿ ನಿವೃತ್ತರಾಗಿ, ಜೀವನದ ಉಳಿದ ಭಾಗವನ್ನು 'ಸೇಂಟ್ ಜುಜೆವಾಜ್ ಹೋಮ್'ನಲ್ಲಿ ಕಳೆಯುತ್ತಿದ್ದರು.

ಮೃತರ ಅಂತ್ಯಕ್ರಿಯೆಯ ದಿವ್ಯ ಬಲಿಪೂಜೆ ಮತ್ತು ಅಂತಿಮ ವಿಧಿವಿಧಾನಗಳು ಅ.5ರಂದು ಬೆಳಿಗ್ಗೆ 10 ಗಂಟೆಗೆ ಮಂಗಳೂರಿನ ವೆಲೆನ್ಸಿಯಾದಲ್ಲಿರುವ ಸೇಂಟ್ ವಿನ್ಸೆಂಟ್ ಫೆರರ್ ಚರ್ಚ್‌ನಲ್ಲಿ ನಡೆಯಲಿವೆ ಎಂದು ಮೂಲಗಳು ತಿಳಿಸಿವೆ.

ಫಾ. ಮಾಣಿ ವೆಳುತ್ತೇಡತ್ತು ಪರಂಬಿಲ್

ಉಜಿರೆ: ಬೆಳ್ತಂಗಡಿ ಧರ್ಮ ಪ್ರಾಂತ್ಯದ ವಿಕಾರ್ ಜನರಲ್ ಫಾದರ್ ಮಾಣಿ ವೆಳುತ್ತೇಡತ್ತು ಪರಂಬಿಲ್ (75) ಅಲ್ಪಕಾಲದ ಅನಾರೋಗ್ಯದಿಂದ ಗುರುವಾರ ನಿಧನರಾದರು ಎಂದು ಧರ್ಮಪ್ರಾಂತ್ಯದ ಚಾನ್ಸಲರ್ ಫಾದರ್ ಲಾರೆನ್ಸ್ ಪೂನೊಲಿಲ್ಸ್ ತಿಳಿಸಿದ್ದಾರೆ.

ಬೆಳ್ತಂಗಡಿ ಧರ್ಮಪ್ರಾಂತ್ಯದಲ್ಲಿ ಹಲವು ಚರ್ಚ್‌ಗಳಲ್ಲಿ ಧರ್ಮಗುರುಗಳಾಗಿ ಸೇವೆ ಸಲ್ಲಿಸಿದ್ದ ಅವರು ಮಹತ್ವದ ಜವಾಬ್ದಾರಿಗಳನ್ನು ನಿರ್ವಹಿಸಿದ ಬಳಿಕ ವಿಕಾರ್ ಜನರಲ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು.

ವಾರಿಜಾ ಶಿವಣ್ಣ

ಮಂಗಳೂರು: ಗಂಜಿಮಠದ ವಾರಿಜಾ ಶಿವಣ್ಣ ಆಚಾರ್ಯ (96) ಅವರು ಗುರುವಾರ (ಅ. 1) ಮುಂಜಾನೆ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರಿಗೆ ಮೂವರು ಪುತ್ರರು, ಒಬ್ಬ ಪುತ್ರಿ ಇದ್ದಾರೆ

ಐವರಿಗೆ ಜೀವಾವಧಿ ಶಿಕ್ಷೆ ಪ್ರಕಟ

ಕೈದಿ ಮಾಡೂರು ಯುಸೂಫ್ ಜೈಲಿನಲ್ಲಿ ಹತ್ಯೆ ಪ್ರಕರಣ

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಚಾರಣಾಧೀನ ಕೈದಿಯಾಗಿದ್ದ ಮಾಡೂರು ಯೂಸುಫ್‌ನನ್ನು ಇಲ್ಲಿನ ಕಾರಾಗೃಹದೊಳಗೇ ಹತ್ಯೆ ಮಾಡಿದ ಪ್ರಕರಣದಲ್ಲಿ ಐವರಿಗೆ ಇಲ್ಲಿನ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಧೀಶರಾದ ಜಗದೀಶ್ ವಿ.ಎನ್ ಅವರು ಜೀವಾವಧಿ ಶಿಕ್ಷೆ ಹಾಗೂ ₹ 76ಸಾವಿರ ದಂಡ ವಿಧಿಸಿ ಗುರುವಾರ ಆದೇಶ ಮಾಡಿದ್ದಾರೆ.

ಸೂರಿಂಜೆಯ ಲಿತೇಶ್ ಪೂಜಾರಿ, ಸುರತ್ಕಲ್ ಮಧ್ಯದ ಶೋಭರಾಜ್, ಶಿಬರೂರಿನ ಯುವರಾಜ್, ಉಳಾಯಿಬೆಟ್ಟುವಿನ ಪ್ರದೀಪ್ ಹಾಗೂ ಸುಳ್ಯ ಬಾಳುಗೋಡುವಿನ ಉಮೇಶ್ ಕೊಂಬಾರು ಜೀವಾವಧಿ ಶಿಕ್ಷೆಗೆ ಒಳಗಾದವರು.

2026ರ ಜ.28ರಂದು ಜೈಲಿನಲ್ಲಿ ಮಾಡೂರು ಯೂಸುಫ್ ಹತ್ಯೆ ನಡೆದಿತ್ತು. ಲಿತೇಶ್ ಪೂಜಾರಿ, ಶೋಭರಾಜ್, ಯುವರಾಜ್, ಪ್ರದೀಪ್, ಉಮೇಶ್ ಕೊಂಬಾರ್, ಶರಣ್ ಪೂಜಾರಿ, ಮಹೇಶ್ ಕುಮಾರ್, ಕಮಲಾಕ್ಷ ಪೂಜಾರಿ, ಸತೀಶ್ ಪೂಜಾರಿ ಹಾಗೂ ಲತೀಶ್ ಎಂಬುವರ ವಿರುದ್ಧ ಬರ್ಕೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ತನಿಖಾಧಿಕಾರಿಯಾಗಿದ್ದ ಎಸಿಪಿ ತಿಲಕಚಂದ್ರ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣದಲ್ಲಿ ಶರಣ್ ಪೂಜಾರಿ, ಮಹೇಶ್ ಕುಮಾರ್, ಕಮಲಾಕ್ಷ ಪೂಜಾರಿ ಹಾಗೂ ಸತೀಶ್ ಪೂಜಾರಿ (ಮೃತಪಟ್ಟಿದ್ದಾರೆ) ಹಾಗೂ ಲತೀಶ್ ಅವರನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ. ಸರ್ಕಾರದ ಪರ ವಕೀಲ ಮೋಹನ್ ವಾದ ಮಂಡಿಸಿದ್ದರು.

ಶ್ರೀ ಧವಲಾ ಕಾಲೇಜು: ತುಳು ವಿಚಾರಗೋಷ್ಠಿ, 'ತುಳುವ ಐಸಿರಿ' ಕಾರ್ಯಕ್ರಮ

'ತುಳು ಸಮೃದ್ಧ ಜಾನಪದ ಸಂಪತ್ತು'

ಪ್ರಜಾವಾಣಿ ವಾರ್ತೆ


ಮೂಡುಬಿದಿರೆಯ ಧವಲಾ ಕಾಲೇಜಿನಲ್ಲಿ ಗುರುವಾರ ನಾಟಿ ವೈದ್ಯೆ, ಶಾಂತಾ ಇಂದುನಾಯ್ಕ್, ದೈವ ನರ್ತಕ ಕರಿಯ ನಲ್ಕೆ ಅವರನ್ನು ಸನ್ಮಾನಿಸಲಾಯಿತು

ಮೂಡುಬಿದಿರೆ: ತುಳುನಾಡಿನಲ್ಲಿ 500ಕ್ಕೂ ಹೆಚ್ಚು ದೈವಗಳಿದ್ದು, ಅಷ್ಟೆ ಸಂಖ್ಯೆಯ ಪಾಡ್ದಾನಗಳಿವೆ. ಇದರ ಜತೆಗೆ ತುಳು ಕವಿತೆ, ಕತೆ, ಒಗಟುಗಳಿದ್ದು ಇವು ತುಳು ಪರಂಪರೆಯನ್ನು ಶ್ರೀಮಂತಗೊಳಿಸಿವೆ. ಬೇರೆ ಭಾಷೆಗಳಿಗೆ ಹೋಲಿಸಿದರೆ ತುಳು ಜಾನಪದ ಸಂಪತ್ತು ಸಮೃದ್ಧಿಯಾಗಿದೆ ಎಂದು ಶಿವರಾಮ ಕಾರಂತ ಟ್ರಸ್ಟ್ ಅಧ್ಯಕ್ಷ ಗಣನಾಥ ಎಕ್ಕಾರು ಹೇಳಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮತ್ತು ಶ್ರೀಧವಲಾ ಮಹಾವಿದ್ಯಾಲಯದ ವತಿಯಿಂದ ಗುರುವಾರ ಧವಲಾ ಕಾಲೇಜಿನಲ್ಲಿ ನಡೆದ ತುಳು ವಿಚಾರಗೋಷ್ಠಿ ಮತ್ತು 'ತುಳುವ ಐಸಿರಿ-2026' ಸಾಹಿತ್ಯ, ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತುಳು ಉಳಿವಿಗೆ ಗ್ರಾಮೀಣ ಭಾಗದ ಯುವಕ ಮಂಡಲಗಳ ಕೊಡುಗೆಯು ಇದೆ. ಇವು ತಮ್ಮ ವಾರ್ಷಿಕೋತ್ಸವದಲ್ಲಿ ತುಳು ನಾಟಕಗಳನ್ನು ಪ್ರದರ್ಶಿಸುತ್ತಿದ್ದವು. ಸಾಮಾನ್ಯ ಕಲಾವಿದರು ತುಳು ನಾಟಕ ರಚಿಸಿ, ಅಭಿನಯಿಸುತ್ತಿದ್ದರು. ಆ ಕಾಲದಲ್ಲಿ ದೊಡ್ಡಣ್ಣ ಶೆಟ್ಟಿ ಊರೂರು ತಿರುಗಿ ತುಳು ನಾಟಕ ಮಾಡಿ, ತುಳು ಪದ್ಯ ಹಾಡಿ ತುಳು ಭಾಷೆಯ ಸೊಬಗನ್ನು ಪಸರಿಸಿದ್ದರು. ಇಂತಹ ಸಮೃದ್ಧ ಭಾಷೆಗೆ ಸರ್ಕಾರ ಮಾನ್ಯತೆ ಸಿಕ್ಕಿರುವುದು ಹೋರಾಟದ ಫಲವಾಗಿದೆ. ತುಳು ಸಂಸ್ಕೃತಿಯನ್ನು ಪರಿಚಯಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡ ಧವಲಾ ಕಾಲೇಜಿನ ಆಡಳಿತ ಮಂಡಲಿ ನಡೆ ಶ್ಲಾಘನೀಯ ಎಂದರು.

ಕಾರ್ಕಳದ ನಾಟಿ ವೈದ್ಯೆ, ಶಾಂತಾ ಇಂದುನಾಯ್ಕ್ ಕಿನ್ನಿಮುಂಡೇವು ಹಾಗೂ ದೈವ ನರ್ತಕ ವಾಲ್ಪಾಡಿಯ ಕರಿಯ ನಲ್ಕೆ ಅವರನ್ನು ಸನ್ಮಾನಿಸಲಾಯಿತು.

ಡಿಜೆವಿವಿ ಸಂಘದ ಸಂಚಾಲಕರಾದ ಕೆ.ಹೇಮರಾಜ್ ಅಧ್ಯಕ್ಷತೆ ವಹಿಸಿದ್ದರು. ತುಳು ಅಕಾಡೆಮಿ ಸದಸ್ಯ ಬಾಬು ಪಾಂಗಾಲ, ಕಾಲೇಜಿನ ಆಡಳಿತ ಮಂಡಳಿ ಸದಸ್ಯ ಪೃಥ್ವಿರಾಜ್, ಸಂಯೋಜಕಿ ಮಲಲ್ಲಿಕಾ ರಾವ್, ಗ್ರಾಮ ಪಂಚಾಯಿತಿ ಸದಸ್ಯ ರಮೇಶ್ ಶೆಟ್ಟಿ, ವಿದ್ಯಾರ್ಥಿ ಸಂಘದ ಅಧ್ಯಕ್ಷ ಅವಿನಾಶ್ ಸುವರ್ಣ, ಲಲಿತಾ ಕಲಾ ಸಂಘದ ಕಾರ್ಯದರ್ಶಿ ಸುಜನ್ ಶೆಟ್ಟಿ, ಜತೆ ಕಾರ್ಯದರ್ಶಿ ತ್ರಿಶಾ ಮತ್ತಿತರರು ಉಪಸ್ಥಿತರಿದ್ದರು.

ಶ್ರೇಯಾ ನಿರೂಪಿಸಿದರು. ತುಳುನಾಡಿನ ವಿವಿಧ ಕಲಾ ಪರಿಕರಗಳನ್ನು ಪ್ರದರ್ಶನ ನಡೆಯಿತು.

ಉಚಿತ ಹೊಲಿಗೆ ತರಬೇತಿ

ಉಜಿರೆ: ಇಲ್ಲಿನ ರುಡ್‌ಸೆಟ್ ಸಂಸ್ಥೆಯಲ್ಲಿ ಮಹಿಳೆಯರಿಗೆ ಅಕ್ಟೋಬರ್ 5ರಿಂದ ನವೆಂಬರ್ 4ರವರೆಗೆ ಪ್ರತಿದಿನ ಬೆಳಿಗ್ಗೆ 9.30ರಿಂದ ಸಂಜೆ 5.30ರವರೆಗೆ ಉಚಿತ ಹೊಲಿಗೆ ತರಬೇತಿ ಹಮ್ಮಿಕೊಳ್ಳಲಾಗಿದೆ. ಪ್ರತಿದಿನ ಮನೆಗೆ ಹೋಗಿ ಬರಲು ಅವಕಾಶವಿದೆ.

ಉಳಿದುಕೊಳ್ಳುವವರಿಗೆ ಉಚಿತ ವಸತಿ ಸೌಲಭ್ಯವಿದೆ. ಆಸಕ್ತರು ತಕ್ಷಣ ಅರ್ಜಿ ಸಲ್ಲಿಸಲು ಕೋರಲಾಗಿದೆ.

ವಿಳಾಸ: ನಿರ್ದೇಶಕರು, ರುಡ್‌ಸೆಟ್ ಸಂಸ್ಥೆ, ಸಿದ್ಧವನ ಬಳಿ, ಉಜಿರೆ – 574240

ಕರ್ನಾಟಕ ಸರ್ಕಾರ
(ಕಾರಾಗೃಹ ಮತ್ತು ಸುಧಾರಣಾ ಸೇವೆಗಳು)
ಅಧೀಕ್ಷಕರ ಕಾರ್ಯಾಲಯ ಜಿಲ್ಲಾ ಕಾರಾಗೃಹ–ಮಂಗಳೂರು–575003
Phone: 0824-2492303, E-mail: dpmng.prisons-kar@gov.in

ಸಂಖ್ಯೆ: ಜಿಕಾಮಂ:ಇ–ದರಖಾಸ್ತು:02:2026–27 ದಿನಾಂಕ: 01.10.2026

ಮರು ದರಖಾಸ್ತು ಪ್ರಕಟಣೆ

2026–27ನೇ ಸಾಲಿಗೆ ಮಂಗಳೂರು ಜಿಲ್ಲಾ ಕಾರಾಗೃಹ ವ್ಯಾಪ್ತಿಯಲ್ಲಿ ಬರುವ ಮಂಗಳೂರು ಮತ್ತು ಉಡುಪಿ ಜಿಲ್ಲಾ ಕಾರಾಗೃಹಗಳಲ್ಲಿ ದಾಖಲಿರುವ ಬಂದಿಗಳಿಗೆ ಊಟ ಮತ್ತು ಉಪಹಾರ ತಯಾರಿಸಲು ಅವಶ್ಯವಿರುವ ಲಾಟ್ ಸಂಖ್ಯೆ: 01 ರಿಂದ 06 ರಲ್ಲಿನ ಆಹಾರ ಧಾನ್ಯಗಳು/ಆಹಾರ ಪದಾರ್ಥಗಳು/ ಸೊಪ್ಪು–ತರಕಾರಿ / ಹಣ್ಣು, ಮೀನು ಮತ್ತು ಕುರಿ–ಕೋಳಿ ಮಾಂಸ, ಮೊಟ್ಟೆ, ಮತ್ತು ಇತರೆ ಸಾಮಗ್ರಿಗಳ ಖರೀದಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮರು ದರಖಾಸ್ತನ್ನು ದಿನಾಂಕ: 01.10.2026 ರಂದು ಪ್ರಕಟಣೆ ಮಾಡಲಾಗಿದೆ. ದಿನಾಂಕ: 16.10.2026 ರ ಸಂಜೆ 5.00 ಗಂಟೆ ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನವಾಗಿರುತ್ತದೆ. ವಿವರವಾದ ಮಾಹಿತಿಯನ್ನು https://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದಾಗಿದೆ. ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0824–2492303 ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–, (ಶರಣಬಸಪ್ಪ)
ಅಧೀಕ್ಷಕರು
ಜಿಲ್ಲಾ ಕಾರಾಗೃಹ ಮಂಗಳೂರು

DIPR/DK/KSMCA/864/26-27 dt. 01.10.2026

सेन्ट्रल बैंक ऑफ़ इंडिया
Central Bank of India
1911 से आपके लिए ''केंद्रित'' "CENTRAL" TO YOU SINCE 1911

ಮಂಗಳೂರು ಶಾಖೆ

ಸ್ಥಿರಾಸ್ತಿಯ ಮಾರಾಟಕ್ಕೆ ಮಾರಾಟದ ಸೂಚನೆ

ಸ್ಥಿರಾಸ್ತಿಗಳ ಇ–ಹರಾಜು ಮಾರಾಟ ಸೂಚನೆ. ಭದ್ರತೆಯ ಅಡಿಯಲ್ಲಿ ಮತ್ತು ಹಣಕಾಸು ಆಸ್ತಿಗಳ ಪುನರ್ನಿಮಾನ ಮತ್ತು ಭದ್ರತಾ ಬಡ್ಡಿ ಕಾಯ್ದೆ 2002(2002 ರ ಪ್ರಕಾರ 6 ವರೆಗೆ ಓದಿ) 2002 ರ ಸುರಕ್ಷತಾ ಆಸಕ್ತಿ(ಜಾರಿ) ನಿಯಮಗಳ ಅಡಿಯಲ್ಲಿ

ಹಣಕಾಸು ಸ್ವತ್ತುಗಳ ಭದ್ರತೆ, ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಕಾಯ್ದೆ, 2002 (SARFAESI ACT) ಅಡಿ ಹಾಗೂ ಭದ್ರತಾ ಆಸಕ್ತಿ (ಜಾರಿ) ನಿಯಮ 2002ರ ನಿಯಮ 8(6)ರ ಅಡಿ ಇ–ಹರಾಜು ಮೂಲಕ ಕರೆಯಲಾದ ಸ್ಥಿರಾಸ್ತಿಗಳ ಮಾರಾಟದ ನೋಟಿಸ್.

ಸಾರ್ವಜನಿಕರಿಗೆ ಸಾಮೂಹಿಕವಾಗಿ ಹಾಗೂ ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ಪ್ರತ್ಯೇಕವಾಗಿ ನೋಟಿಸ್ ಜಾರಿ ಮಾಡಿದ್ದು, ಈ ಮೂಲಕ ತಿಳಿಸುವುದೇನೆಂದರೆ, ಸುರಕ್ಷಿತ ಸಾಲಗಾರರಿಗೆ ಅಡಮಾನ ಮಾಡಲಾದ/ಅಧಿಕಾರ ನೀಡಲಾದ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಸುರಕ್ಷಿತ ಸಾಲದಾತರಾದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕೃತ ಅಧಿಕಾರಿಗಳು ರಚನಾತ್ಮಕ/ಭೌತಿಕ ಸ್ವಾಧೀನಕ್ಕೆ ತೆಗೆದುಕೊಂಡಿದ್ದು, ಸ ಖಾಸಗಿ ಒಪ್ಪಂದದ ಪ್ರಕಾರ ಬ್ಯಾಂಕ್‌ಗೆ ಸಮ್ಮತವಾಗುವ ನಿಯಮಗಳ ಅನುಸಾರ **'ಎಲ್ಲಿದೆಯೋ ಹಾಗೆ'** ಮತ್ತು **'ಸ್ವತ್ತುಹೇಗಿದೆಯೋ ಹಾಗೆ'** ಹಾಗೂ **'ಏನಿದೆಯೋ ಇದ್ದ ಹಾಗೆ'** ಸ್ಥಿತಿಯಲ್ಲಿ ಈ ಆಸ್ತಿಗಳು ಈ ಕೆಳಗೆ ನಿರ್ದಿಷ್ಟಪಡಿಸಿದ ದಿನಾಂಕ ಮತ್ತು ಸಮಯದಲ್ಲಿ ಮಾರಾಟಕ್ಕೆ ಲಭ್ಯವಿವೆ. ಈ ಆಸ್ತಿಗಳಿಗೆ ಮೀಸಲು ಬೆಲೆ ಮತ್ತು ಠೇವಣಿ ಮಾಡಬೇಕಾದ ಇಎಂಡಿ ಮೊತ್ತದ ವಿವರಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ.

ಕ್ರ. ಸಂ.	ಶಾಖೆಯ ಹೆಸರು ಮತ್ತು ಖಾತೆ ಶಾಖೆ: ಮಂಗಳೂರು	ಸ್ಥಿರಾಸ್ತಿಯ ವಿವರಗಳು	ಡಿಮ್ಯಾಂಡ್ ನೋಟೀಸ್ ದಿನಾಂಕ ಬಾಕಿ ಮೊತ್ತ ಸ್ವಾಧೀನ ದಿನಾಂಕ	ಮೀಸಲು ಬೆಲೆ: ರೂ. ಇಎಂಡಿ ಹೆಚ್ಚಳ ಮೌಲ್ಯ	ಇ–ಹರಾಜಿನ ದಿನಾಂಕ ಮತ್ತು ಸಮಯ: ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ
1	ಶ್ರೀ ದಿನೇಶ ಕೊಟ್ಯಾನ್ ತಂದೆ ಇಥಪ್ಪ ಕೊಟ್ಯಾನ್, 4 139, ಪುಲುಕುಲಾ ಹೌಸ್, ಪುತ್ತಿಗೆ, ಸಂಪಿಗೆ, ಮೂಡಬಿದರೆ, ಮಂಗಳೂರ, ದಕ್ಷಿಣ ಕನ್ನಡ–574227	ಸರ್ವೆ ನಂ 152/1AP1-P1 & 152/2D1P1-P1 **ವಿಸ್ತೀರ್ಣದಲ್ಲಿ:** 0–37 ಎಕರೆ ಮತ್ತು 0–13 ಎಕರೆ, ಒಟ್ಟು: 0–50 ಎಕರೆ, ಆಸ್ತಿ ಗುರುತಿನ ಸಂಖ್ಯೆ:09 ಮತ್ತು 11a.-151100304500120368 ಪ್ರಕಾರ, ಮಂಗಳೂರು ತಾಲೂಕಿನ ಹೊಸಬೆಟ್ಟು ಗ್ರಾಮದ ಹೊಸಬೆಟ್ಟು ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಹಾಗೂ ಮೂಡುಬಿದರೆಯ ನೋಂದಣಿ ವ್ಯಾಪ್ತಿಯಲ್ಲಿ ಸಂಪೂರ್ಣ ವಾರ್ಗ ಹಕ್ಕಿನ ಮೇಲೆ ಇರುವ ಕೃಷಿಯೇತರ ಸ್ಥಿರಾಸ್ತಿ. ಮೇಲೆ ತಿಳಿಸಿದ 0–50 ಎಕರೆ ಜಾಗದಲ್ಲಿರುವ "ಚೆಲರೋನ ಮತ್ತು ಸಿಂಚನ" ಹೆಸರಿನ ಬಹುಮಹಡಿ ಅಪಾರ್ಟಮೆಂಟ್ ನಂ. 301, 3ನೇ ಮಹಡಿಯಲ್ಲಿರುವ ಮನೆ ನಂ. 1–2/7(41), "ಚೆಲರೋನ ಮತ್ತು ಸಿಂಚನ" ಹೆಸರಿನ 1492 ಚ.ಅಡಿ ಸೂಪರ್ ಬಿಲ್ಟಪ್ ವಿಸ್ತೀರ್ಣ ಹೊಂದಿದ, ನೆಲಮಹಡಿ ಪಾರ್ಕಿಂಗ್ ಸಮೇತ ನಂ. 16 ಮತ್ತು 2.14% ಅವಿಭಾಜಿತ ಶೇರು ಹೊಂದಿರುವ ಆಸ್ತಿ	04–07–2023 Rs. 30,68,404.69 ಮತ್ತು ಅದರ ಮೇಲಿನ ಬಡ್ಡಿ ಮತ್ತಿತರ ವೆಚ್ಚಗಳು ದಿನಾಂಕ 04–07–2023	ರೂ. 31,36,500 ರೂ. 3,13,650/–	22.10.2026 ಬೆಳಗ್ಗೆ 10.00 ರಿಂದ ಸಂಜೆ 6.00
2	ಶ್ರೀಮತಿ ಸವಿತಾ ಗಂಡ ಶ್ರೀ ದಿನೇಶ ಕೊಟ್ಯಾನ್ 4 139, ಪುಲುಕುಲಾ ಹೌಸ್, ಪುತ್ತಿಗೆ, ಸಂಪಿಗೆ, ಮೂಡಬಿದರೆ, ಮಂಗಳೂರ, ದಕ್ಷಿಣ ಕನ್ನಡ–574227		11–09–2023	ರೂ. 20,000/–	22.10.2025, ಸಂಜೆ 5.00 ಗಂಟೆ ವರೆಗೆ

ಸಾರ್ವಜನಿಕರಿಗೆ ಸಾಮೂಹಿಕವಾಗಿ ಹಾಗೂ ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ಪ್ರತ್ಯೇಕವಾಗಿ ನೋಟಿಸ್ ಜಾರಿ ಮಾಡಿದ್ದು, ಈ ಮೂಲಕ ತಿಳಿಸುವುದೇನೆಂದರೆ, ಸುರಕ್ಷಿತ ಸಾಲಗಾರರಿಗೆ ಅಡಮಾನ ಮಾಡಲಾದ/ಅಧಿಕಾರ ನೀಡಲಾದ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಸುರಕ್ಷಿತ ಸಾಲದಾತರಾದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕೃತ ಅಧಿಕಾರಿಗಳು ರಚನಾತ್ಮಕ/ಭೌತಿಕ ಸ್ವಾಧೀನಕ್ಕೆ ತೆಗೆದುಕೊಂಡಿದ್ದು, ಖಾಸಗಿ ಒಪ್ಪಂದದ ಪ್ರಕಾರ ಬ್ಯಾಂಕ್‌ಗೆ ಸಮ್ಮತವಾಗುವ ನಿಯಮಗಳ ಅನುಸಾರ **'ಎಲ್ಲಿದೆಯೋ ಹಾಗೆ'** ಮತ್ತು **'ಸ್ವತ್ತು ಹೇಗಿದೆಯೋ ಹಾಗೆ'** ಹಾಗೂ **'ಏನಿದೆಯೋ ಇದ್ದ ಹಾಗೆ'** (ಪೀಠೋಪಕರಣಗಳು, ಫಿಕ್ಚರ್ಸ್, ಸ್ಟಾಕ್ಸ್, ಹಾಗೂ ಇತರೆ ಚರಾಸ್ತಿಗಳನ್ನು ಹೊರತುಪಡಿಸಿ) ಸ್ಥಿತಿಯಲ್ಲಿ ಈ ಆಸ್ತಿಗಳನ್ನು ದಿನಾಂಕ 22–10–2026ರಂದು ಆನ್ ಲೈನ ವೆಬ್ ಪೋರ್ಟಲ್ https://BAANKNET.COM) ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾಗೆ ಬರಬೇಕಾಗಿರುವ ಬಾಕಿ ಮೊತ್ತವನ್ನು ವಸೂಲಿ ಮಾಡಲು ಹರಾಜು ಮಾಡಲಾಗುವುದು. ಇ–ಹರಾಜಿನ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು https://www.centralbankofindia.co.in ಅನ್ನು ನೋಡಿ.

2002 ರ ಭದ್ರತಾ ಹಿತಾಸಕ್ತಿ(ಜಾರಿ) ನಿಯಮಗಳ ನಿಯಮ 6(20 ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ–ಹರಾಜು.

ಆಸಕ್ತಿ ಬಿಡ್‌ದಾರರು ಇ ಹರಾಜಿನಲ್ಲಿ ಭಾಗವಹಿಸಲು ವೆಬ್ ಪೋರ್ಟಲ್ https://baanknet.com/eauction-psb/bidder-registration ಮೂಲಕ ನೋಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸವರ್ಡ್ ಪಡೆಯಬೇಕು. ಇಹರಾಜಿನ ಪ್ರಕ್ರಿಯೆಯ ಬಗ್ಗೆ ತಿಳಿದುಕೊಳ್ಳಲು https://BAANKNET.COM) ನೋಡಿ. ಇ–ಹರಾಜಿನ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು https://www.centralbankofindia.co.in ಅನ್ನು ನೋಡಿ.

ಯಶಸ್ವಿ ಬಿಡ್‌ದಾರರು ಬಿಡ್ ಮೊತ್ತದ 25% ಅನ್ನು (ಇಎಮ್‌ಡಿ ಮೊತ್ತವನ್ನು ಒಳಗೊಂಡಂತೆ) ಅದೇ ದಿನ ಅಥವಾ ಹರಾಜಿನ ಮರುದಿನ ಮಾವತಿಸಬೇಕು. ಯಶಸ್ವಿ ಬಿಡ್‌ದಾರರು ಹರಾಜಿನ ಮರಿದಿನದೊಳಗೆ ಬಿಡ್ ಮೊತ್ತದ 25% ಹಣವನ್ನು ಪಾವತಿಸಲು ವಿಫಲವಾದರರೆ ಇಎಮ್‌ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮಾರಾಟದ ದೃಢಿಕರಣದ 15 ದಿನಗಳಲ್ಲಿ ಸಂಪೂರ್ಣ ಬಿಡ್ಡ ಮೊತ್ತವನ್ನು ಪಾವತಿಸಬೇಕು. ನಿಗದಿತ ಅವಧಿಯೊಳಗೆ ಬಿಡ್ ಮೊತ್ತವನ್ನು ಪಾವತಿಸಲು ವಿಫಲವಾದರೆ ಈಗಾಗಲೇ ಪಾವತಿಸಿದ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಮಾರಾಟ ಪ್ರಮಾಣಪತ್ರವನ್ನು ಬಿಡ್ ಸಲ್ಲಿಸಿದ ವ್ಯಕ್ತಿ/ಗಳ ಹೆಸರಿನಲ್ಲಿ ಮಾತ್ರ ನೀಡಲಾಗುವುದು, ಬೇರೆ ಯಾವುದೇ ವ್ಯಕ್ತಿ/ಗಳ ಹೆಸರಿನಲ್ಲಿ ಅಲ್ಲ. ಯಶಸ್ವಿ ಬಿಡ್ದಾರರು ನೋಂದಣಿ ವೆಚ್ಚಗಳು/ ಮುದ್ರಾಂಕ ಶುಲ್ಕ ಅಥವಾ ಅನ್ವಯವಾಗುವ ಯಾಔಉದೇ ಇತರ ವೆಚ್ಚವನ್ನು ಭರಿಸುತ್ತಾರೆ.

ನಿಯಮಗಳು ಮತ್ತು ಷರತ್ತುಗಳು ಕಟ್ಟುನಿಟ್ಟಾಗಿ ಭದ್ರತಾ ಆಸಕ್ತಿಯ ನಿಯಮಗಳ (ಜಾರಿ) ನಿಯಮಗಳು, 2002ರ ನಿಬಂಧನೆಗಳ ಪ್ರಕಾರ ಇರಬೇಕು.

ಸರ್ಫೇಸಿ ಕಾಯ್ದೆ, 2002ರ ನಿಯಮ 8(6)ರ ಅಡಿಯಲ್ಲಿ 15 ದಿನಗಳ ಶಾಸನಬದ್ಧ ಮಾರಾಟದ ನೋಟಿಸ್

ಸಾಲಗಾರ/ಖಾತರಿದಾರರು ಮೇಲೆ ತಿಳಿಸಿದ ಮೊತ್ತವನ್ನು ಇ–ಹರಾಜಿನ ದಿನಾಂಕದ ಮೊದಲು ನವೀಕೃತ ಬಡ್ಡಿ ಮತ್ತು ಪೂರಕ ವೆಚ್ಚಗಳೊಂದಿಗೆ ಪಾವತಿಸಲು ಸೂಚಿಸಲಾಗಿದೆ. ಇದರಲ್ಲಿ ವಿಫಲರಾದರೆ ಆಸ್ತಿಯನ್ನು ಹರಾಜು/ಮಾರಾಟ ಮಾಡಲಾಗುವುದು ಮತ್ತು ಇನ್ನಷ್ಟು ಮೊತ್ತವು ಬಾಕಿ ಉಳಿದಿದ್ದರೆ, ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲಿ ಮಾಡಲಾಗುವುದು.

ದಿನಾಂಕ: 30–09–2026
ಸ್ಥಳ: ಮಂಗಳೂರ

ಸಹಿ/– ಅಧಿಕೃತ ಅಧಿಕಾರಿ
ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ